INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,64-73
Peer Reviewed Journal, Referred Journal

# ಹಾಸನ ಜಿಲ್ಲೆಯ ಸ್ಥಳೀಯ ರಾಜಕಾರಣ: ಒಂದು ಸ್ಥೂಲ ಪರಿಚಯ

**ಡಿ.ಬಿ.ಚನ್ನಬಸಪ್ಪ.**[1]

ಹಾಸನ ಜಿಲ್ಲೆಯು ರಾಷ್ಟ್ರ ಮತ್ತು ರಾಜ್ಯದ ಚರಿತ್ರೆಯಲ್ಲಿ ವಿಶಿಷ್ಟವಾದ ಛಾಪಿನ ಮುದ್ರೆಯನ್ನು ಹಾಕಿದೆ. ಇದು ಸಾಂಸ್ಕೃತಿಕವಾಗಿ ವಿಶ್ವವಿಖ್ಯಾತವಾದ ಗೋಮ್ಮಟೇಶ್ವರನ ಮೂರ್ತಿ ಹಾಗೂ ಮತ್ತೊಂದು ರಾಜಕಾರಣದಲ್ಲಿ ಸದಾ ಸಕ್ರಿಯವಾಗಿರುವದೇ ಆಗಿದೆ. ಈ ನೆಲೆ ಮತ್ತು ಹಿನ್ನೆಲೆಯಿಂದಲೇ ಇಲ್ಲಿನ ಸ್ಥಳೀಯ ರಾಜಕಾರಣವನ್ನು ಸಾದರಪಡಿಸುವ ಮೊದಲು ಅದರ ವೈಶಿಷ್ಟತೆಯನ್ನು ಅರಿಯುವುದು ಬಹುಮುಖ್ಯವೇ ಆಗಿರುತ್ತದೆ. ಏಕೆಂದರೆ, ಯಾವುದೇ ಒಂದು ಸ್ಥಳದ ವೈಶಿಷ್ಟ್ಯವು ಅಲ್ಲಿನ ಅನೇಕ ಅಂಶಗಳನ್ನು ನಿರ್ಧಾರಿಸುವ ಅಪಾರವಾದಂಥ ಶಕ್ತಿಯನ್ನು ಹೊಂದಿರುತ್ತದೆ. ಮತ್ತೇ ಅದೇ ತೆರೆನಾಗಿರುವಂಥ ಶಕ್ತಿಯೂ ರಾಜಕಾರಣವನ್ನು ಕೂಡ ನಿರ್ಧರಿಸುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಇದರ ವೈಶಿಷ್ಟ್ಯತೆಯನ್ನು ಅವಲೋಕಿಸಿದಾಗ; ಹಾಸನ ಜಿಲ್ಲೆಯು ಕರ್ನಾಟಕ ರಾಜ್ಯದ 31 ಜಿಲ್ಲೆಗಳಲ್ಲಿ ಒಂದು ಪ್ರಮುಖ ಜಿಲ್ಲೆಯೇ ಆಗಿರುತ್ತದೆ. ಇದು ಭಾರತ ದೇಶದಲ್ಲಿನ ಕರ್ನಾಟಕ ರಾಜ್ಯದ ನೈಋತ್ಯ ಭಾಗದಲ್ಲಿದೆ. ಈ ಹಾಸನ ಜಿಲ್ಲೆಯೂ ಘಟನಾತ್ಮಕ ಮತ್ತು ಶ್ರೀಮಂತ ಚರಿತ್ರೆಯನ್ನು ಕೂಡ ಹೊಂದಿರುತ್ತದೆ. ಈ ಹಿಂದೆ ಇದು ಬೇಲೂರು ತಾಲೋಕಿನ ಆಧುನಿಕ ಹಳೇಬೀಡಾದ ದ್ವಾರಸಮುದ್ರದಲ್ಲಿ ರಾಜಧಾನಿಯನ್ನು ಹೊಂದಿದ್ದ ಹೊಯ್ಸಳರ ಆಳ್ವಕೆಯಲ್ಲಿ ತನ್ನ ಗತವೈಭವದ ಉತ್ತುಂಗವನ್ನು ತಲುಪಿತು. ಮಂತ್ರಮುಗ್ಧವಾದ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರುವಾಸಿಯಾದ ಜಿಲ್ಲೆಯು ಹೊಯ್ಸಳರ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ನೈಜತೆಯೂ ಕೂಡ ನಿಧಿಯಾಗಿದೆ. ಇವುಗಳ ಅತ್ಯುತ್ತಮ ಮಾದರಿಗಳು ಬೇಲೂರು ಮತ್ತು ಹಳೇಬೀಡಿನಲ್ಲಿವೆ ಎಂದು ಹೇಳಬಹುದು. ಚನ್ನರಾಯಪಟ್ಟಣ ತಾಲೋಕಿನಲ್ಲಿರುವ ಶ್ರವಣಬೆಳಗೊಳ, ಜೈನರ ಮಾದರಿಗಳಂದ ಕೂಡಿದ್ದು, ಜೈನರ ಪ್ರಸಿದ್ಧ ಯಾತ್ರ ಕೇಂದ್ರವೇ ಆಗಿದೆ. ಆದರೆ, ಜನಪ್ರಿಯ ನಂಬಿಕೆ ಎಂದರೆ, ಈ ಸ್ಥಳವನ್ನು ಹಾಸನ ಎಂದು ಕರೆಯಲಾಗುತ್ತದೆ. ಹಸನ್ – ಅಮ್ಮ ಅಥವಾ ಹಸನಾಂಬ, ಹಳೆಯ ಪಟ್ಟಣ ಪ್ರದೇಶದಲ್ಲಿರುವ ಸ್ಥಳೀಯ ಹಾಸನಾಂಬ ದೇವಾಲಯದ ಪ್ರಧಾನ ದೇವತೆಯಾಗಿದೆ.

---

1. **ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ , ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಣಾವರ.**

ಹಾಸನ ಜಿಲ್ಲೆ ರಾಜಕಾರಣ ಮತ್ತು ರಾಜಕೀಯ ಚರಿತ್ರೆಯನ್ನು ಗ್ರಹಿಸಿದಾಗ; ಈ ಹಾಸನ ಜಿಲ್ಲೆಯೂ ರಾಷ್ಟ್ರ ರಾಜಕಾರಣಕ್ಕೆ ಪ್ರಧಾನ ಮಂತ್ರಿಯನ್ನು ಮತ್ತು ರಾಜ್ಯದ ರಾಜಕಾರಣಕ್ಕೆ ಮುಖ್ಯಮಂತ್ರಿಗಳನ್ನು ನೀಡಿದ ಹೆಗ್ಗಳಿಕೆಗೆ ಭಾಜಿನವೇ ಆಗಿರುತ್ತದೆ. ಹಾಗೆಯೇ, ಈ ಹಾಸನ ಜಿಲ್ಲೆಯೂ ರಾಷ್ಟ್ರ ಮತ್ತು ರಾಜ್ಯ ರಾಜಕಾರಣಕ್ಕೆ ಸಂಬಂಧಿಸಿದಂತೆಯೇ ಒಂದು ಲೋಕಸಭಾ ಮತ್ತು 7 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ನಗರ ರಾಜಕಾರಣದ ಭಾಗವಾಗಿ ಎರಡು ನಗರಸಭೆಗಳನ್ನು, 4 ಪುರಸಭೆಗಳನ್ನು ಮತ್ತು ಎರಡು ಪಟ್ಟಣ ಪಂಚಾಯಿತಿಗಳನ್ನು ಹೊಂದಿರುತ್ತದೆ. ಗ್ರಾಮೀಣ ರಾಜಕಾರಣದಲ್ಲಿ ಒಂದು ಜಿಲ್ಲಾ ಪಂಚಾಯಿತಿಯನ್ನು, 8 ತಾಲೋಕು ಪಂಚಾಯಿತಿಗಳನ್ನು ಮತ್ತು 267 ಗ್ರಾಮ ಪಂಚಾಯಿತಿಗಳನ್ನು ಹೊಂದಿರುತ್ತದೆ ಎಂಬುದು ತಿಳಿದುಬರುತ್ತದೆ. ಆದರೆ, ಪ್ರಸ್ತುತ ಅಧ್ಯಯನದಲ್ಲಿ ಗ್ರಾಮೀಣ ಅಥವಾ ಸ್ಥಳೀಯ ರಾಜಕಾರಣಕ್ಕೆ ಹೆಚ್ಚಿನ ಒತ್ತನ್ನು ನೀಡಿ ಹಾಸನ ಜಿಲ್ಲಾ ಪಂಚಾಯಿತಿ, ತಾಲೋಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿರುವ ಸದಸ್ಯರುಗಳ ವರ್ಗಾವಾರು ಮತ್ತು ಲಿಂಗಾವಾರು ಅಂಕಿ – ಅಂಶಗಳನ್ನು ಮಾತ್ರ ಈ ಮುಂದಿನಂತೆ ದಾಖಲೀಕರಿಸಿರುವ ಕೋಷ್ಠಗಳಲ್ಲಿರುವಂತೆ ಒಂದು ಸ್ಥೂಲ ನೋಟವನ್ನು ಚರ್ಚಿಸಲಾಗಿರುತ್ತದೆ.

ರಾಜಕೀಯವು ಉತ್ತಮ ಸರಕುಗಳು, ಸೇವೆಗಳು ಮತ್ತು ಸವಲತ್ತುಗಳನ್ನು ಸರ್ಕಾರದಿಂದ ಹಂಚುವ ಪ್ರಕ್ರಿಯೆಯನ್ನು ಬಹಮುಖ್ಯವಾಗಿಯೇ ಒಳಗೊಂಡಿರುತ್ತದೆ ಅಥವಾ ಇತರ ಸಾಮಾಜಿಕ ಸಂಸ್ಥೆಗಳಿಂದ ಅವುಗಳ ನ್ಯಾಯಬದ್ಧ ಹಂಚಿಕೆಗೆ ನಿಯಮಗಳನ್ನು ಸ್ಥಾಪಿಸಲಾಗಿದೆ. ಸ್ಥಳೀಯ ಸರ್ಕಾರವು ರಾಷ್ಟ್ರೀಯ ಅಥವಾ ರಾಜ್ಯ ಸರ್ಕಾರಗಳ' ರಾಜಕೀಯ ಉಪವಿಭಾಗವಾಗಿದ್ದು, ಅವುಗಳ ಸಾಂಸ್ಕೃತಿಕವಾಗಿ ನಿರ್ವಹಿಸುವಂಥ ಕಾರ್ಯಗಳನ್ನು ಮತ್ತು ಸ್ಥಳೀಯ ಪಾತ್ರವನ್ನು ಇವು ತಪ್ಪದೇ ನಿರ್ವಹಿಸುತ್ತವೆ ಎಂದು ಹೇಳಬಹುದು. ಇವುಗಳು ಬಹುತೇಕ ಎಲ್ಲಾ ಸಂದರ್ಭಗಳಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಸರ್ಕಾರದಿಂದ ತನ್ನ ಕಾನೂನು ಅಧಿಕಾರವನ್ನು ಪಡೆಯುತ್ತದೆ. ಆದರೆ, ಸ್ವಲ್ಪ ಮಟ್ಟಿಗೆ ವಿವೇಚನೆಯನ್ನು ಹೊಂದಿದೆ. ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮತ್ತು ಸಾಮಾನ್ಯವಾಗಿ ಕೆಲವು ಸ್ಥಳೀಯ ತೆರಿಗೆ ಅಧಿಕಾರಗಳನ್ನು ಕೂಡ ಹೊಂದಿರುತ್ತದೆ. ಆದ್ದರಿಂದ ಸ್ಥಳೀಯ ರಾಜಕೀಯವು ಕೇವಲ ರಾಷ್ಟ್ರೀಯ ರಾಜಕೀಯ ವಿಷಯಗಳಿಗೆ ಸಂಬಂಧಿಸದ ಸ್ಥಳೀಯ ಚಟುವಟಿಕೆಗಳನ್ನು ಒಳಗೊಂಡಿರುವುದಿಲ್ಲ. ಆದರೆ, ಇದು ಕಚೇರಿ ಹೊಂದಿರುವವರನ್ನು ಆಯ್ಕೆ ಮಾಡುವುದು ಮತ್ತು ಅದನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಘಟಕದ ವ್ಯಾಪ್ತಿಯಲ್ಲಿ ಆಯ್ಕೆ ಮಾಡುವ ಮಟ್ಟವನ್ನು ಒಳಗೊಂಡಿರುತ್ತದೆ. ಸಾರ್ವಜನಿಕ ನೀತಿಯ ಈ ನಿರ್ಧಾರಗಳನ್ನು ಸ್ಥಳೀಯ ರಾಜಕೀಯ ವ್ಯವಸ್ಥೆ ಮತ್ತು ಅದರ ಸಂಸ್ಥೆಗಳ ಮೂಲಕ ಏಕಪಕ್ಷೀಯವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. ಸಾಮಾನ್ಯವಾಗಿ ನಿರ್ಧಾರಗಳನ್ನು ಇತರ ಸರ್ಕಾರಗಳೊಂದಿಗೆ ಹಂಚಿಕೊಳ್ಳಲಾಗಿದೆ. ಮತ್ತೇ

ಸ್ಥಳೀಯ ರಾಜಕೀಯ ಸಂಸ್ಥೆಗಳು ಮತ್ತು ಅವುಗಳ ಪ್ರಕ್ರಿಯೆಗಳು ಸರ್ವೆಸಾಮಾನ್ಯವಾಗಿ ನೆರೆಹೊರೆಯ ಪ್ರದೇಶಗಳ, ಪ್ರಾದೇಶಿಕ ಮತ್ತು ರಾಷ್ಟ್ರೀಯ ವ್ಯವಸ್ಥೆಗಳೊಂದಿಗೆ ಹೆಣೆದುಕೊಂಡಿರುತ್ತದೆ.

ಸ್ಥಳೀಯ ಮಟ್ಟದಲ್ಲಿ ರಾಜಕೀಯದ ಮಾದರಿಗಳು ಬಹಳ ವೈವಿಧ್ಯಮಯೇ ಆಗಿರುತ್ತವೆ. ಸಮಾಜದಲ್ಲಿ ಸಿದ್ಧಾಂತ, ಸಾಮಾಜಿಕ ರಚನೆ ಮತ್ತು ತಂತ್ರಜ್ಞಾನದ ಚಾಲ್ತಿಯಲ್ಲಿರುವ ಪ್ರಭಾವಗಳಿಗೆ ಅನುಗುಣವಾಗಿ ಅವರು ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಪಾತ್ರವನ್ನು ನಿರ್ವಹಿಸುತ್ತಾರೆ. ಆದಿಮ ಸಾಮಾಜಿಕ ವ್ಯವಸ್ಥೆಗಳಲ್ಲಿ ಮಾನ್ಯತೆ ಪಡೆದ ರಾಜಕೀಯ ಸಂಸ್ಥೆಗಳ ಹಾದಿಯಲ್ಲಿ ಸ್ವಲ್ಪವೇ ಇಲ್ಲಿ ಇರಬಹುದು. ಆದರೆ, ಅಸ್ತಿತ್ವದಲ್ಲಿರುವವುಗಳಲ್ಲಿ ಸ್ಥಳೀಯ ರಾಜಕೀಯ ವ್ಯವಸ್ಥೆಗಳು ಸಾಮಾನ್ಯವಾಗಿ ರಾಷ್ಟ್ರೀಯಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿವೆ ಎಂದು ಹೇಳಬಹುದು. ಹೆಚ್ಚು ಸಂಕೀರ್ಣ ಸಮಾಜಗಳಲ್ಲಿ ಸರ್ಕಾರಿ ಅಧಿಕಾರಿಶಾಹಿಗಳು ಪರಿಣಿತಿ ಹೊಂದಿದ್ದು, ಅಲ್ಲಿ ಸರ್ಕಾರಿ ಕಾರ್ಯಗಳ ರೀತಿಯಲ್ಲಿ ಹೆಚ್ಚು ನಿರೀಕ್ಷೆಯಿದೆ. ತ್ವರಿತ ಸಾರಿಗೆ ಮತ್ತು ಸಂವಹನ ವಿಧಾನಗಳು ಇರುವಲ್ಲಿ ಸ್ಥಳೀಯ ಸರ್ಕಾರದ ಚಟುವಟಿಕೆಗಳು ಮತ್ತು ಸಾಪೇಕ್ಷ ಪ್ರಾಮುಖ್ಯತೆಯೂ ಬಹುಮಟ್ಟಿಗೆ ವಿಚಾರಧಾರೆಯ ಕಾರ್ಯವಾಗಿ ಮಾರ್ಪಟ್ಟಿರುತ್ತದೆ. ಇಲ್ಲಿ ನಂಬಿಕೆ ವ್ಯವಸ್ಥೆಗಳು ಮತ್ತು ಸಂಪ್ರದಾಯಗಳು ಜನಸಂಖ್ಯೆಯು ರಾಜಕೀಯವಾಗಿ ಮಹತ್ವದ ಭಾಗದ ಮನಸ್ಸನ್ನು ಸ್ಥಿತಿಗೊಳಸುತ್ತವೆ ಎಂದು ಹೇಳಬಹುದು. ಆದ್ದರಿಂದಲೇ, ಮುಂದಿನಂತೆ ಇರುವ ಹಾಸನ ಜಿಲ್ಲೆಯ ಸ್ಥಳೀಯ ರಾಜಕಾರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿ, ತಾಲೋಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳಲ್ಲಿ ವರ್ಗಾವಾರು ಮತ್ತು ಲಂಗಾವಾರು ಅಂಕಿ ಅಂಶಗಳನ್ನು ಚುನಾವಣಾ ಆಯೋಗದ ಅಧಿನಿಯಮದ ಪ್ರಕಾರ ದಾಖಲಿಸಿ ವಿಶ್ಲೇಷಿಸಲಾಗಿದೆ.

**ಕೋಷ್ಟಕ – 01: ಹಾಸನ ಜಿಲ್ಲಾ ಪಂಚಾಯಿತಿಯು ಹೊಂದಿರುವ ಸ್ಥಾನಗಳ ವಿವರ**

| ಕ್ರ.ಸಂ | ತಾಲೋಕುಗಳು ಮತ್ತು ಅವುಗಳು ಹೊಂದಿರುವ ಸ್ಥಾನಗಳ ವಿವರ | ಒಟ್ಟು ಸದಸ್ಯರು | | ಸಾಮಾನ್ಯ | | ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | |
|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| 1 | ಆಲೂರು (02) | 1 | 1 | – | 1 | – | – | 1 | – | – | – |
| 2 | ಅರಕಲಗೂಡು (05) | 4 | 1 | 1 | 1 | 2 | – | 1 | – | – | – |
| 3 | ಅರಸೀಕೆರೆ (07) | 3 | 4 | 2 | 1 | 1 | 1 | – | 1 | – | 1 |
| 4 | ಬೇಲೂರು (05) | 2 | 3 | 1 | 2 | 1 | – | – | 1 | – | – |
| 5 | ಚನ್ನರಾಯಪಟ್ಟಣ(07) | 2 | 5 | 1 | 3 | 1 | 1 | – | 1 | – | – |
| 6 | ಹಾಸನ (07) | 3 | 4 | 3 | 1 | – | 2 | – | 1 | – | – |
| 7 | ಹೊಳೇನರಸೀಪುರ(04) | 3 | 1 | 2 | – | – | 1 | 1 | – | – | – |
| 8 | ಸಕಲೇಶಪುರ (03) | 2 | 1 | 1 | – | – | 1 | 1 | – | – | – |
| ಒಟ್ಟು | | 20 | 20 | 11 | 9 | 5 | 6 | 4 | 4 | – | 1 |

**ಆಧಾರ: ಕರ್ನಾಟಕ ರಾಜ್ಯಪತ್ರ, ದಿನಾಂಕ: ಡಿಸೆಂಬರ್ 04, 2015**

ಈ ಮೇಲಿನ ಕೋಷ್ಟಕವು ಹಾಸನ ಜಿಲ್ಲಾ ಪಂಚಾಯಿತಿಯು ಹೊಂದಿರುವ ವರ್ಗಾವಾರು ಸ್ಥಾನಗಳನ್ನು ಸಾದರಪಡಿಸುತ್ತದೆ. ಅದರಂತೆಯೇ, ಒಟ್ಟು 40 ಸ್ಥಾನಗಳಿಂದ ರಚಿತಗೊಂಡಿದೆ. ಈ ಸ್ಥಾನಗಳ ಪೈಕಿ 20 ಸ್ಥಾನಗಳು ಶೇಕಡಾ 50ರಷ್ಟು ಪುರುಷರು ಮತ್ತು 20 ಸ್ಥಾನಗಳು ಶೇಕಡಾ 50ರಷ್ಟು ಮಹಿಳೆಯರಿದ್ದಾರೆ. ಹಾಗೆಯೇ, ಸಾಮಾನ್ಯ ವರ್ಗಕ್ಕೆ 20 ಸ್ಥಾನಗಳು ಮೀಸಲಿದ್ದು, ಅವುಗಳಲ್ಲಿ ಪುರುಷರು 11 ಮತ್ತು ಮಹಿಳೆಯರಿಗೆ 9 ಸ್ಥಾನಗಳನ್ನು, ಹಿಂದುಳಿದ ಅ ಮತ್ತು ಬ ವರ್ಗಗಳಿಗೆ 11 ಸ್ಥಾನಗಳಿದ್ದು, ಪುರುಷರು 5 ಮತ್ತು ಮಹಿಳೆಯರು 6 ಸ್ಥಾನಗಳನ್ನು, ಪರಿಶಿಷ್ಟ ಜಾತಿಯವರಿಗೆ 8 ಸ್ಥಾನಗಳಿದ್ದು, ಅದರ ತಲಾ 4 ಪುರುಷರು ಮತ್ತು ಮಹಿಳೆಯರು ಮತ್ತು ಪರಿಶಿಷ್ಟ ಪಂಗಡವದರಿಗೆ ಒಂದು ಸ್ಥಾನವೂ ನಿಗಧಿಯಾಗಿದ್ದು, ಆ ಒಂದು ಸ್ಥಾನವೂ ಮಹಿಳೆಗೆ ಮೀಸಲಾಗಿರುತ್ತದೆ ಎಂಬುದನ್ನು ಗುರುತಿಸಬಹುದು.

ಹೀಗೆ, ಸಾಮಾನ್ಯ ವರ್ಗ, ಹಿಂದುಳಿದ ಅ ಮತ್ತು ಬ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿರುವಂಥ ಈ 40 ಸ್ಥಾನಗಳು ಹಾಸನ ಜಿಲ್ಲೆಯ 8 ತಾಲೋಕುಗಳಿಗೂ ವಿಂಗಡಣೆಯಾಗಿದ್ದು, ಈ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದಾಗ; **ಆಲೂರು** ತಾಲೋಕು 2 ಸ್ಥಾನಗಳನ್ನು ಶೇಕಡಾ 5ರಷ್ಟು ಹೊಂದಿದೆ. ತಲಾ ಒಂದೊಂದು ಸ್ಥಾನವನ್ನು ಪುರುಷರು ಮತ್ತು ಮಹಿಳೆಯರಿಗೆ ನೀಡಲಾಗಿದೆ. ಹಾಗೆಯೇ ಒಂದು ಸ್ಥಾನವೂ ಸಾಮಾನ್ಯ ಮಹಿಳೆಯೂ ಮತ್ತು ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯವರು ಪಡೆದುಕೊಂಡಿರುವುದು ಈ ಮುಖೇನ ತಿಳಿದುಬಂದಿರುತ್ತದೆ. **ಅರಕಲಗೂಡು** ತಾಲೋಕು 5 ಸ್ಥಾನಗಳನ್ನು ಶೇಕಡಾ 12ರಷ್ಟು ಹೊಂದಿದೆ. ಇದರಲ್ಲಿ ಸಾಮಾನ್ಯ ವರ್ಗದವರು ತಲಾ ಒಂದೊಂದು ಸ್ಥಾನವನ್ನು ಪುರುಷ ಮತ್ತು ಮಹಿಳೆಯರು ಪಡೆದುಕೊಂಡಿದ್ದಾರೆ. ಹಾಗೆಯೇ ಹಿಂದುಳಿದ ಅ ಮತ್ತು ಬ ವರ್ಗದ ಪುರುಷರು ತಲಾ ಒಂದೊಂದು ಸ್ಥಾನವನ್ನು ಮತ್ತು ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯ ಪುರುಷರು ಗಳಿಸಿಕೊಂಡಿದ್ದಾರೆ.

**ಅರಸೀಕೆರೆ** ತಾಲೋಕು 7 ಸ್ಥಾನಗಳನ್ನು ಶೇಕಡಾ 17ರಷ್ಟು ಹೊಂದಿದೆ. ಸಾಮಾನ್ಯ ವರ್ಗಕ್ಕೆ 3 ಸ್ಥಾನಗಳನ್ನು ನೀಡಲಾಗಿದ್ದು, ಈ ಸ್ಥಾನಗಳಲ್ಲಿ ಇಬ್ಬರು ಪುರುಷರು ಮತ್ತು ಒಬ್ಬರು ಮಹಿಳೆಯರು, ಹಿಂದುಳಿದ ವರ್ಗ ಅ ಮತ್ತು ಬ ವರ್ಗಗಳಿಗೆ ಎರಡು ಸ್ಥಾನಗಳನ್ನು ನೀಡಿದ್ದು, ಅವುಗಳಲ್ಲಿ ಅ ವರ್ಗದ ಮಹಿಳೆಯೂ ಮತ್ತು ಬ ವರ್ಗದ ಪುರುಷರು ತಲಾ ಒಂದೊಂದು ಸ್ಥಾನವನ್ನು ಪಡೆದುಕೊಂಡಿದ್ದಾರೆ. ಮತ್ತೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆರಿಗೆ ತಲಾ ಒಂದೊಂದು ಸ್ಥಾನವನ್ನು ನೀಡಲಾಗಿದೆ ಎಂಬುದು ತಿಳಿದುಬಂದಿರುತ್ತದೆ. **ಬೇಲೂರು** ತಾಲೋಕು 5 ಸ್ಥಾನಗಳನ್ನು ಶೇಕಡಾ 12ರಷ್ಟು ಹೊಂದಿದೆ. ಈ ಸ್ಥಾನಗಳ ಪೈಕಿ ಸಾಮಾನ್ಯ ವರ್ಗಕ್ಕೆ ಮೂರು ಸ್ಥಾನಗಳು, ಇದರಲ್ಲಿ ಒಬ್ಬ ಪುರುಷ ಮತ್ತು ಇಬ್ಬರು ಮಹಿಳೆಯರು ಆಯ್ಕೆಯಾಗಿದ್ದಾರೆ. ಹಿಂದುಳಿದ ಅ ವರ್ಗಕ್ಕೆ ಒಂದು ಸ್ಥಾನವಿದ್ದು,

ಅದರಲ್ಲಿ ಪುರುಷರು ಆಯ್ಕೆಯಾಗಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ನಿಗಧಿಯಾಗಿರುವಂಥ ಒಂದು ಸ್ಥಾನವನ್ನು ಮಹಿಳೆಗೆ ಮೀಸಲಿಡಲಾಗಿದೆ.

**ಚನ್ನರಾಯಪಟ್ಟಣ** ತಾಲೋಕು 7 ಸ್ಥಾನಗಳನ್ನು ಶೇಕಡಾ 17ರಷ್ಟು ಹೊಂದಿದೆ. ಈ ಸ್ಥಾನಗಳಲ್ಲಿ 4 ಸಾಮಾನ್ಯ ವರ್ಗಕ್ಕೆ ನಿಗಧಿಯಾಗಿರುತ್ತದೆ. ಅದರಲ್ಲಿ ಒಂದು ಪುರುಷರು ಮತ್ತು 3 ಮಹಿಳೆಯರು, ಹಿಂದುಳಿದ ವರ್ಗಕ್ಕೆ ಎರಡು ಸ್ಥಾನಗಳಿದ್ದು, ಅವುಗಳಲ್ಲಿ, ತಲಾ ಒಂದೊಂದು ಸ್ಥಾನವನ್ನು ಪುರುಷ ಮತ್ತು ಮಹಿಳೆಯರು ಪಡೆದುಕೊಂಡಿದ್ದಾರೆ. ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ ನಿಗಧಿ ಮಾಡಲಾಗಿದ್ದು, ಆ ಸ್ಥಾನವನ್ನು ಮಹಿಳೆಯೂ ಪಡೆದಿದ್ದಾರೆ. **ಹಾಸನ** ತಾಲೋಕು 7 ಸ್ಥಾನಗಳನ್ನು ಶೇಕಡಾ 17ರಷ್ಟು ಹೊಂದಿದೆ. 4 ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ನೀಡಲಾಗಿದ್ದು, ಅದರಲ್ಲಿ 3 ಸ್ಥಾನಗಳಲ್ಲಿ ಪುರುಷರು ಮತ್ತು ಒಂದು ಸ್ಥಾನವು ಮಹಿಳೆಗೆ, ಹಿಂದುಳಿ ವರ್ಗಕ್ಕೆ 2 ಸ್ಥಾನಗಳಿದ್ದು, ಆ ಎರಡು ಸ್ಥಾನಗಳೂ ಕೂಡ ಮಹಿಳೆಯರಿಗೆ ಮೀಸಲಾಗಿರುತ್ತದೆ. ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ ನೀಡಿದ್ದು, ಅದರಲ್ಲಿ ಮಹಿಳೆಯೂ ಆಯ್ಕೆಯಾಗಿ ಜಿಲ್ಲಾ ಪಂಚಾಯಿತಿಯನ್ನು ಪ್ರವೇಶಿಸಿದ್ದಾರೆ.

**ಹೊಳೇನರಸೀಪುರ** ತಾಲೋಕು 4 ಸ್ಥಾನಗಳನ್ನು ಶೇಕಡಾ 10ರಷ್ಟು ಹೊಂದಿದೆ. ಎರಡು ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಆ ಎರಡು ಸ್ಥಾನಗಳಲ್ಲಿಯೂ ಕೂಡ ಪುರುಷರೇ ಆಯ್ಕೆಯಾಗಿದ್ದಾರೆ. ಹಿಂದುಳಿದ ಅ ವರ್ಗದ ಮಹಿಳೆಗೆ ಒಂದು ಸ್ಥಾನವನ್ನು ಮತ್ತು ಪರಿಶಿಷ್ಟ ಜಾತಿಯ ಪುರುಷರಿಗೆ ಒಂದು ಸ್ಥಾನವನ್ನು ನೀಡಲಾಗಿರುತ್ತದೆ. ಹಾಗೆಯೇ, **ಸಕಲೇಶಪುರ** ತಾಲೋಕು 3 ಸ್ಥಾನಗಳನ್ನು ಶೇಕಡಾ 7ರಷ್ಟಿದ್ದು, ಅದರಲ್ಲಿ ಒಂದು ಸ್ಥಾನವು ಸಾಮಾನ್ಯ ವರ್ಗಕ್ಕೆ, ಒಂದು ಸ್ಥಾನವೂ ಹಿಂದುಳಿದ ಅ ವರ್ಗದ ಮಹಿಳೆಗೆ ಮತ್ತು ಒಂದು ಸ್ಥಾನವು ಪರಿಶಿಷ್ಟ ಜಾತಿಯ ಪುರುಷರಿಗೆ ನೀಡಲಾಗಿರುತ್ತದೆ ಎಂಬುದು ಈ ಮೇಲಿನ ಕೋಷ್ಟಕ: 01ರಲ್ಲಿ ದಾಖಲೀಕರಣಗೊಂಡಿರುವಂಥ ಅಂಕಿ ಅಂಶಗಳಿಂದ ದೃಢಪಟ್ಟಿರುತ್ತದೆ ಎಂದು ಹೇಳಬಹುದು.

**ಕೋಷ್ಟಕ – 02: ಹಾಸನ ಜಿಲ್ಲೆಯ ತಾಲೋಕು ಪಂಚಾಯಿತಿಗಳು ಹೊಂದಿರುವ ಸ್ಥಾನಗಳ ವಿವರ**

| ಕ್ರ.ಸಂ | ತಾಲೋಕುಗಳು ಮತ್ತು ಅವುಗಳು ಹೊಂದಿರುವ ಸ್ಥಾನಗಳ ವಿವರ | ಒಟ್ಟು ಸದಸ್ಯರು | | ಸಾಮಾನ್ಯ | | ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | |
|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| 1 | ಆಲೂರು (11) | 5 | 6 | 4 | 2 | – | 1 | 1 | 2 | – | 1 |
| 2 | ಅರಕಲಗೂಡು (19) | 9 | 10 | 5 | 5 | 2 | 2 | 2 | 2 | – | 1 |
| 3 | ಅರಸೀಕೆರೆ (27) | 13 | 14 | 7 | 7 | 3 | 3 | 3 | 3 | – | 1 |

| | | | | | | | | | | | |
|---|---|---|---|---|---|---|---|---|---|---|---|
| 4 | **ಬೇಲೂರು** (17) | 8 | 9 | 5 | 4 | – | 1 | 3 | 3 | – | 1 |
| 5 | **ಚನ್ನರಾಯಪಟ್ಟಣ**(25) | 12 | 13 | 7 | 6 | 4 | 4 | 1 | 2 | – | 1 |
| 6 | **ಹಾಸನ** (27) | 13 | 14 | 7 | 7 | 4 | 4 | 2 | 2 | – | 1 |
| 7 | **ಹೊಳೇನರಸೀಪುರ**(16) | 8 | 8 | 5 | 3 | 2 | 2 | 1 | 2 | – | 1 |
| 8 | **ಸಕಲೇಶಪುರ** (11) | 5 | 6 | 3 | 3 | – | – | 2 | 2 | – | 1 |
| **ಒಟ್ಟು** | | **74** | **80** | **43** | **37** | **15** | **17** | **16** | **18** | **0** | **8** |

**ಆಧಾರ: ಕರ್ನಾಟಕ ರಾಜ್ಯಪತ್ರ, ದಿನಾಂಕ: ಡಿಸೆಂಬರ್ 04, 2015**

ಈ ಮೇಲಿನ ಕೋಷ್ಠಕವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ; ಹಾಸನ ಜಿಲ್ಲೆಯ 8 ತಾಲೋಕುಗಳು ಕೂಡ ಒಂದೊಂದು ತಾಲೋಕು ಪಂಚಾಯಿಯನ್ನು ಹೊಂದಿರುತ್ತವೆ. ಈ 8 ತಾಲೋಕು ಪಂಚಾಯಿತಿಗಳಂದ ಸರಿಸುಮಾರು ಒಟ್ಟು 154 ಸ್ಥಾನಗಳನ್ನು ಹೊಂದಿರುತ್ತವೆ. ಅವುಗಳಲ್ಲಿ 74 ಜನ ಪುರುಷರು ಶೇಕಡಾ 48.05ರಷ್ಟು ಮತ್ತು 80 ಜನ ಮಹಿಳೆಯರು ಶೇಕಡಾ 51.94ರಷ್ಟು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಗುರುತಿಸಲಾಗಿದೆ. ಈ ಜಿಲ್ಲೆಯಲ್ಲಿನ ತಾಲೋಕು ಪಂಚಾಯಿತಿಗಳಲ್ಲಿ ಪುರುಷರಿಗಿಂತ ಶೇಕಡಾ 2ರಷ್ಟು ಮಹಿಳೆಯರೇ ಹೆಚ್ಚಿನ ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದಾರೆ ಎಂಬುದು ತಿಳದುಬಂದಿರುತ್ತದೆ.

**ಆಲೂರು** ತಾಲೋಕು ಪಂಚಾತಿಯು 11 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 6 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ 4 ಜನ ಪರುಷರು ಮತ್ತು ಇಬ್ಬರು ಮಹಿಳೆಯರು, ಹಿಂದುಳಿದ ವರ್ಗಕ್ಕೆ ಒಂದು ಸ್ಥಾನವೂ ದೊಕಿದ್ದು, ಅದರಿಂದ ಒಬ್ಬ ಮಹಿಳೆಯೂ ಆಯ್ಕೆಯಾಗಿದ್ದಾರೆ. ಮತ್ತೇ ಪರಿಶಿಷ್ಟ ಜಾತಿಯವರಿಗೆ 3 ಸ್ಥಾನಗಳನ್ನು ನೀಡಿದ್ದು, ಒಬ್ಬರು ಪುರುಷ ಮತ್ತು ಇಬ್ಬರು ಮಹಿಳೆಯರು, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ ಎಂಬುದು ತಿಳದುಬಂದಿರುತ್ತದೆ. **ಅರಕಲಗೂಡು** ತಾಲೋಕು ಪಂಚಾತಿಯು 19 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 10 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ ತಲಾ 5 ಜನ ಪುರುಷರು ಮತ್ತು ಮಹಿಳೆಯರಿಗೆ, ಹಿಂದುಳದ ವರ್ಗಕ್ಕೆ 4 ಸ್ಥಾನಗಳೂ ದೊರಕಿದ್ದು, ಅದರಲ್ಲಿ ತಲಾ ಇಬ್ಬರು ಪುರುಷರು ಮತ್ತು ಮಹಿಳೆಯರಿಗೆ ನೀಡಲಾಗಿದೆ. ಮತ್ತೇ ಪರಿಶಿಷ್ಟ ಜಾತಿಯವರಿಗೆ 4 ಸ್ಥಾನಗಳನ್ನು ನೀಡಿದ್ದು, ಅವರಲ್ಲಿ ತಲಾ ಇಬ್ಬರು ಪುರುಷ ಮತ್ತು ಮಹಿಳೆಯರಿಗೆ, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ.

**ಅರಸೀಕೆರೆ** ತಾಲೋಕು ಪಂಚಾತಿಯು 27 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 14 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ ತಲಾ 7 ಜನ ಪರುಷರು ಮತ್ತು ಮಹಿಳೆಯರು, ಹಿಂದುಳಿದ ವರ್ಗಕ್ಕೆ 6 ಸ್ಥಾನಗಳು ದೊರೆಕ್ಕಿದ್ದು, ಅದರಲ್ಲಿ ತಲಾ 3 ಪುರುಷರು ಮತ್ತು ಮಹಿಳೆಯರಿಗೆ

ದೊಕಿದೆ. ಪರಿಶಿಷ್ಟ ಜಾತಿಯವರಿಗೆ 6 ಸ್ಥಾನಗಳು ದಕ್ಕಿದ್ದು, ತಲಾ 3 ಜನ ಪುರುಷರು ಮತ್ತು ಮಹಿಳೆಯರಿಗೆ, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ ಎಂಬುದು ತಿಳಿದುಬಂದಿರುತ್ತದೆ. **ಬೇಲೂರು** ತಾಲೋಕು ಪಂಚಾತಿಯು 17 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 9 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ 5 ಜನ ಪುರುಷರು ಮತ್ತು 4 ಜನ ಮಹಿಳೆಯರು, ಹಿಂದುಳಿದ ವರ್ಗಕ್ಕೆ ಒಂದೇ ಒಂದು ಸ್ಥಾನವೂ ದೊಕಿದ್ದು, ಅದನ್ನು ಮಹಿಳೆಗೆ ನೀಡಲಾಗಿದೆ. ಮತ್ತೇ ಪರಿಶಿಷ್ಟ ಜಾತಿಯವರಿಗೆ 6 ಸ್ಥಾನಗಳನ್ನು ನೀಡಿದ್ದು, ತಲಾ 3 ಜನ ಪುರುಷರು ಮತ್ತು ಮಹಿಳೆಯರಿಗೆ, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ.

**ಚನ್ನರಾಯಪಟ್ಟಣ** ತಾಲೋಕು ಪಂಚಾತಿಯು 25 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 13 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ 7 ಜನ ಪುರುಷರು ಮತ್ತು 6 ಜನ ಮಹಿಳೆಯರು, ಹಿಂದುಳಿದ ವರ್ಗಕ್ಕೆ 8 ಸ್ಥಾನಗಳು ದೊಕಿದ್ದು, ಅದನ್ನು ತಲಾ 4 ಜನ ಪುರುಷರಿಗೆ ಮತ್ತು ಮಹಿಳೆಯರಿಗೆ ನೀಡಲಾಗಿದೆ. ಮತ್ತೇ ಪರಿಶಿಷ್ಟ ಜಾತಿಯವರಿಗೆ 3 ಸ್ಥಾನಗಳನ್ನು ನೀಡಿದ್ದು, ಒಬ್ಬರು ಪುರುಷ ಮತ್ತು ಇಬ್ಬರು ಮಹಿಳೆಯರು, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ. **ಹಾಸನ** ತಾಲೋಕು ಪಂಚಾತಿಯು 27 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 14 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ ತಲಾ 7 ಜನ ಪುರುಷರು ಮತ್ತು ಮಹಿಳೆಯರು, ಹಿಂದುಳಿದ ವರ್ಗಕ್ಕೆ 8 ಸ್ಥಾನಗಳು ದೊಕಿದ್ದು, ಅದನ್ನು ತಲಾ 4 ಜನ ಪುರಷರಿಗೆ ಮತ್ತು ಮಹಿಳೆಗೆ ನೀಡಲಾಗಿದೆ. ಮತ್ತೇ ಪರಿಶಿಷ್ಟ ಜಾತಿಯವರಿಗೆ 4 ಸ್ಥಾನಗಳನ್ನು ನೀಡಿದ್ದು, ತಲಾ ಇಬ್ಬರು ಪುರುಷ ಮತ್ತು ಮಹಿಳೆಯರು, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ ಎಂಬುದು ತಿಳಿದುಬಂದಿರುತ್ತದೆ.

**ಹೊಳೆನರಸೀಪುರ** ತಾಲೋಕು ಪಂಚಾತಿಯು 16 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 8 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ 5 ಜನ ಪುರುಷರು ಮತ್ತು 3 ಜನ ಮಹಿಳೆಯರು, ಹಿಂದುಳಿದ ವರ್ಗಕ್ಕೆ 4 ಸ್ಥಾನಗಳು ದೊಕಿದ್ದು, ಅದನ್ನು ತಲಾ ಇಬ್ಬರು ಪುರುಷರು ಮತ್ತು ಮಹಿಳೆಗೆ ನೀಡಲಾಗಿದೆ. ಮತ್ತೇ ಪರಿಶಿಷ್ಟ ಜಾತಿಯವರಿಗೆ 3 ಸ್ಥಾನಗಳನ್ನು ನೀಡಿದ್ದು, ಒಬ್ಬರು ಪುರುಷ ಮತ್ತು ಇಬ್ಬರು ಮಹಿಳೆಯರು, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ ಎಂಬುದು ತಿಳಿದುಬಂದಿರುತ್ತದೆ. **ಸಕಲೇಶಪುರ** ತಾಲೋಕು ಪಂಚಾತಿಯು 11 ಸ್ಥಾನಗಳನ್ನು ಹೊಂದಿದ್ದು, ಅದರಲ್ಲಿ 6 ಜನ ಸಾಮಾನ್ಯ ವರ್ಗದಿಂದ ಆಯ್ಕೆಯಾಗಿದ್ದಾರೆ. ಅವರಲ್ಲಿ ತಲಾ ಮೂರು ಜನ ಪುರುಷರು ಮತ್ತು ಮಹಿಳೆಯರು, ಮತ್ತೇ ಪರಿಶಿಷ್ಟ ಜಾತಿಯವರಿಗೆ 4 ಸ್ಥಾನಗಳನ್ನು ನೀಡಿದ್ದು, ಅದನ್ನು ತಲಾ ಇಬ್ಬರು ಪುರುಷ ಮತ್ತು ಮಹಿಳೆಯರು, ಹಾಗೆಯೇ, ಒಂದು ಸ್ಥಾನವು ಪರಿಶಿಷ್ಟ ಪಂಗಡದ ಮಹಿಳೆಗೆ ನೀಡಲಾಗಿದೆ ಎಂಬುದು ತಿಳಿದುಬಂದಿರುತ್ತದೆ. ಹೀಗೆ, ಹಾಸನ ಜಿಲ್ಲೆಯ ತಾಲೋಕು ಪಂಚಾಯಿತಿಗಳಲ್ಲಿ

ವಿವಿಧ ಜಾತಿ – ವರ್ಗ ಮತ್ತು ಲಿಂಗವಾರು ಆಯ್ಕೆಯಾಗಿ ಬಂದು ಕಾರ್ಯನಿರ್ವಹಿಸುವ ಮೂಲಕ ಜಿಲ್ಲೆಯಲ್ಲಿನ ಅಭಿವೃದ್ಧಿ ಕಡೆಗೆ ಸಾಗುವಂತೆ ಮಾಡಿದ್ದಾರೆ ಎಂದು ಹೇಳಬಹುದು.

**ಕೋಷ್ಟಕ – 03: ಹಾಸನ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿಗಳು ಹೊಂದಿರುವ ಸ್ಥಾನಗಳ ವಿವರ**

| ಕ್ರ.ಸಂ | ತಾಲೋಕುಗಳ ವಿವರ | ಒಟ್ಟು ಸದಸ್ಯರು | | ಸಾಮಾನ್ಯ | | ಹಿಂದುಳಿದ ವರ್ಗ | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | |
|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| 1 | **ಆಲೂರು – 15** | 92 | 101 | 58 | 41 | 11 | 15 | 23 | 30 | 01 | 15 |
| 2 | **ಅರಕಲಗೂಡು–36** | 233 | 257 | 154 | 104 | 37 | 58 | 42 | 59 | 00 | 36 |
| 3 | **ಅರಸೀಕೆರೆ – 45** | 343 | 355 | 232 | 137 | 57 | 84 | 54 | 86 | 02 | 48 |
| 4 | **ಬೇಲೂರು – 37** | 199 | 214 | 127 | 83 | 10 | 15 | 61 | 78 | 01 | 38 |
| 5 | **ಚನ್ನರಾಯಪಟ್ಟಣ–41** | 305 | 325 | 198 | 130 | 81 | 107 | 26 | 46 | 00 | 42 |
| 6 | **ಹಾಸನ – 41** | 315 | 266 | 195 | 152 | 75 | 101 | 44 | 62 | 01 | 41 |
| 7 | **ಹೊಳೇನರಸೀಪುರ – 26** | 201 | 210 | 125 | 91 | 46 | 50 | 30 | 43 | 00 | 26 |
| 8 | **ಸಕಲೇಶಪುರ – 26** | 131 | 140 | 87 | 52 | 04 | 10 | 40 | 52 | 00 | 26 |
| **ಒಟ್ಟು – 267** | | **1919** | **1898** | **1180** | **790** | **321** | **400** | **320** | **436** | **05** | **294** |

**ಆಧಾರ: ಕರ್ನಾಟಕ ರಾಜ್ಯಪತ್ರ, 2020ನೇ ಜುಲೈ 30**

ಈ ಮೇಲಿನ ಕೋಷ್ಟಕವು ಹಾಸನ ಜಿಲ್ಲೆಯ ಒಟ್ಟು ಗ್ರಾಮ ಪಂಚಾಯಿತಿಗಳ ವಿವರವನ್ನು ದಾಖಲಿಸಿರುತ್ತದೆ. ಅದರಂತೇ, ಹಾಸನ ಜಿಲ್ಲೆಯು ಒಟ್ಟು 267 ಗ್ರಾಮ ಪಂಚಾಯಿತಿಗಳನ್ನು ಹೊಂದಿರುತ್ತದೆ. ಈ ಗ್ರಾಮ ಪಂಚಾಯಿತಿಗಳು ತಾಲೋಕುವಾರು ವಿಭಜಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ 8 ತಾಲೋಕುಗಳನ್ನು ಒಮ್ಮೆ ಅವಲೋಕಿಸಿದಾಗ; ಆಲೂರು 15, ಅರಕಲಗೂಡು 36, ಅರಸೀಕೆರೆ 45, ಬೇಲೂರು 37, ಚನ್ನರಾಯಪಟ್ಟಣ 41, ಹಾಸನ 41, ಹೊಳೆನರಸೀಪುರು 26 ಮತ್ತು ಸಕಲೇಶಪುರ ತಾಲೋಕು 26 ಗ್ರಾಮ ಪಂಚಾಯಿತಿಗಳನ್ನು ಹೊಂದಿರುತ್ತದೆ ಎಂಬುದು ದೃಢಪಟ್ಟಿರುತ್ತದೆ ಎಂದು ಹೇಳಬಹುದು. ಹಾಗೆಯೇ, ಈ ಜಿಲ್ಲೆಯು ಒಟ್ಟು 3817 ಸದಸ್ಯರನ್ನು ಹೊಂದಿದೆ. ಅದರಲ್ಲಿ 1919 ಪುರುಷರು ಮತ್ತು 1898 ಮಹಿಳೆಯರಿದ್ದಾರೆ. ಅವರಲ್ಲಿ ಸಾಮಾನ್ಯ ವರ್ಗದ 1970 ಜನರಿದ್ದು, ಅವರಲ್ಲಿ 1180 ಪುರುಷರು ಮತ್ತು 790 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 321 ಪುರುಷರು ಮತ್ತು 400 ಮಹಿಳೆಯರು, ಪರಿಶಿಷ್ಟ ಜಾತಿಯ 320 ಪುರುಷರು ಮತ್ತು 436 ಮಹಿಳೆಯರು ಹಾಗೂ ಪರಿಶಿಷ್ಟ ಪಂಗಡದ 05 ಪುರುಷರು ಮತ್ತು 294 ಮಹಿಳೆಯರಿದ್ದಾರೆ ಎಂಬುದನ್ನು ಗುರುತಿಸಬಹುದು. ಹಾಗೆಯೇ, ಜಿಲ್ಲೆಯ ತಾಲೋಕುವಾರು ವಿಶ್ಲೇಷಿಸಿದಾಗ; **ಆಲೂರು**

ತಾಲೋಕಿನಲ್ಲಿ ಸಾಮಾನ್ಯ ವರ್ಗದ 58 ಪುರುಷರು ಮತ್ತು 41 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 11 ಪುರುಷರು ಮತ್ತು 15 ಮಹಿಳೆಯರು, ಪರಿಶಿಷ್ಟ ಜಾತಿಯ 23 ಪುರುಷರು ಮತ್ತು 30 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಒಬ್ಬ ಪುರುಷರು ಮತ್ತು 15 ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. **ಅರಕಲಗೂಡು** ತಾಲೋಕಿನಲ್ಲಿ ಸಾಮಾನ್ಯ ವರ್ಗದ 154 ಪುರುಷರು ಮತ್ತು 104 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 37 ಪುರುಷರು ಮತ್ತು 58 ಮಹಿಳೆಯರು, ಪರಿಶಿಷ್ಟ ಜಾತಿಯ 42 ಪುರುಷರು ಮತ್ತು 59 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಪುರುಷರಿಗೆ ಯಾವುದೇ ಸ್ಥಾನವೂ ಕೂಡ ನಿಗಧಿಯಾಗಿರುವುದಿಲ್ಲ ಆದರೆ, 36 ಜನ ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.

**ಅರಸೀಕೆರೆ** ತಾಲೋಕಿನಲ್ಲಿ ಸಾಮಾನ್ಯ ವರ್ಗದ 232 ಪುರುಷರು ಮತ್ತು 137 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 57 ಪುರುಷರು ಮತ್ತು 85 ಮಹಿಳೆಯರು, ಪರಿಶಿಷ್ಟ ಜಾತಿಯ 54 ಪುರುಷರು ಮತ್ತು 86 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಇಬ್ಬರು ಪುರುಷರು ಮತ್ತು 48 ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. **ಬೇಲೂರು** ತಾಲೋಕಿನಲ್ಲಿ ಸಾಮಾನ್ಯ ವರ್ಗದ 127 ಪುರುಷರು ಮತ್ತು 83 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 10 ಪುರುಷರು ಮತ್ತು 15 ಮಹಿಳೆಯರು, ಪರಿಶಿಷ್ಟ ಜಾತಿಯ 61 ಪುರುಷರು ಮತ್ತು 78 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಒಬ್ಬ ಪುರುಷ ಮತ್ತು 38 ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.

**ಚನ್ನರಾಯಪಟ್ಟಣ** ತಾಲೋಕಿನಲ್ಲಿ ಸಾಮಾನ್ಯ ವರ್ಗದ 198 ಪುರುಷರು ಮತ್ತು 130 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 81 ಪುರುಷರು ಮತ್ತು 107 ಮಹಿಳೆಯರು, ಪರಿಶಿಷ್ಟ ಜಾತಿಯ 26 ಪುರುಷರು ಮತ್ತು 46 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಪುರುಷರಿಗೆ ಯಾವುದೇ ಸ್ಥಾನವೂ ನಿಗಧಿಯಾಗಿಲ್ಲ. ಆದರೆ, 42 ಜನ ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. **ಹಾಸನ** ತಾಲೋಕಿನಲ್ಲಿ ಸಾಮಾನ್ಯ ವರ್ಗದ 195 ಪುರುಷರು ಮತ್ತು 152 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 75 ಪುರುಷರು ಮತ್ತು 101 ಮಹಿಳೆಯರು, ಪರಿಶಿಷ್ಟ ಜಾತಿಯ 44 62 ಪುರುಷರು ಮತ್ತು ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಒಬ್ಬ ಪುರುಷ ಮತ್ತು 41 ಜನ ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.

**ಹೊಳೆನರಸೀಪುರ** ತಾಲೋಕಿನಲ್ಲಿ ಸಾಮಾನ್ಯ ವರ್ಗದ 125 ಪುರುಷರು ಮತ್ತು 91 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 46 ಪುರುಷರು ಮತ್ತು 50 ಮಹಿಳೆಯರು, ಪರಿಶಿಷ್ಟ ಜಾತಿಯ 30 ಪುರುಷರು ಮತ್ತು 43 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ 06 ಪುರುಷರು ಮತ್ತು 26 ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. **ಸಕಲೇಶಪುರ** ತಾಲೋಕಿನಲ್ಲಿ ಸಾಮಾನ್ಯ ವರ್ಗದ 87 ಪುರುಷರು ಮತ್ತು 52 ಮಹಿಳೆಯರು, ಹಿಂದುಳಿದ ಅ ಮತ್ತು ಬ ವರ್ಗದ 04 ಪುರುಷರು

ಮತ್ತು 10 ಮಹಿಳೆಯರು, ಪರಿಶಿಷ್ಟ ಜಾತಿಯ 40 ಪುರುಷರು ಮತ್ತು 52 ಮಹಿಳೆಯರು ಮತ್ತು ಪರಿಶಿಷ್ಟ ಪಂಗಡದ ಪುರುಷರಿಗೆ ಯಾವುದೇ ಸ್ಥಾನವೂ ಕೂಡ ನಿಗಧಿಯಾಗಿಲ್ಲ. ಆದರೆ, 26 ಜನ ಮಹಿಳೆಯರು ಸ್ಥಾನಗಳನ್ನು ಪಡೆದುಕೊಂಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ; ರಾಷ್ಟ್ರ ಮತ್ತು ರಾಜ್ಯದ ರಾಜಕಾರಣ ಒಂದು ಅಡಿಗಲ್ಲು ಇದ್ದಾಗೆ ಈ ಸ್ಥಳೀಯ ರಾಜಕಾರಣ. ಮತ್ತೇ, ರಾಷ್ಟ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ರೂಪಿಸಿರುವಂಥ ಕಾನೂನುಗಳು ಹಾಗೂ ಪ್ರಗತಿ ಪರ ಯೋಜನೆಗಳನ್ನು ಸ್ಥಳೀಯ ಮಟ್ಟದಲ್ಲಿ ಕಾರ್ಯಗತಗೊಳಿಸುವಂಥ ಸಂಸ್ಥೆ ಇದಾಗಿದೆ. ಹಾಗೆಯೇ, ಅದೇಷ್ಟೋ ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕೀಯ ನಾಯಕರು ಈ ಸ್ಥಳೀಯ ರಾಜಕಾರಣದಿಂದಲೇ ಬಂದವರೇ ಆಗಿದ್ದಾರೆ. ಅದಕ್ಕೆ ಸಾಕ್ಷೀರಿಸುವಂತೆ ದಾಖಲೀಸುವುದಾದರೆ; ಈ ಹಾಸನ ಜಿಲ್ಲೆಯ ಎಚ್.ಡಿ.ದೇವೇಗೌಡ ಅವರು ಸ್ಥಳೀಯ ಮಟ್ಟದಿಂದ ರಾಷ್ಟ್ರ ಮಟ್ಟದ ರಾಜಕಾರಣಿಯಾಗಿ ಪ್ರಧಾನ ಮಂತ್ರಿಯೂ ಆಗಿದ್ದಾರೆ ಎಂಬುದು ಪ್ರತ್ಯೇಕ್ಷ ನಿದರ್ಶನವೇ ಆಗಿರುತ್ತದೆ. ಅಂದರೆ, ಇಂಥ ಶಕ್ತಿಯೂ ಸ್ಥಳೀಯ ರಾಜಕಾರಣಕ್ಕಿದೆ ಎಂಬುದನ್ನು ಅದು ಸಾಬೀತು ಪಡಿಸಿರುತ್ತದೆ.

**ಪರಾಮರ್ಶನ ಗ್ರಂಥಗಳು**

1. ಕರ್ನಾಟಕ ರಾಜ್ಯಪತ್ರ – 2015, ಹಾಸನ ಜಿಲ್ಲಾ ಜಿಲ್ಲಾ ಪಂಚಾಯಿತಿ, ಡಿಸೆಂಬರ್ 04, 2015.
2. ಕರ್ನಾಟಕ ರಾಜ್ಯಪತ್ರ – 2015, ಹಾಸನ ಜಿಲ್ಲೆಯ ತಾಲೋಕು ಪಂಚಾಯಿತಿ, ಡಿಸೆಂಬರ್ 04, 2015.
3. ಕರ್ನಾಟಕ ರಾಜ್ಯಪತ್ರ – 2020, ಹಾಸನ ಜಿಲ್ಲೆಯ ಗ್ರಾಮ ಪಂಚಾಯಿತಿಯ ಚುನಾವಣೆ – ಜುಲೈ 30, 2020
4. ಹಾಸನ ಜಿಲ್ಲೆಯ ಅಂಕಿ – ಅಂಶಗಳ ನೋಟ, 2020-21
5. ಹಾಸನ ಜಿಲ್ಲಾ ಮಾನವ ಅಭಿವೃದ್ಧಿ ವರದಿ - 2014